Rotary
2025-26

ಮಿಡ್‌ಟೌನ್ ನ್ಯೂಸ್
# Midtown News

R.I. DISTRICT 3182 Zone-10 Club No. 21853 Charter Date : 16-05-1984
In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty
President : Rtn. Harsha Kamath
Secretary : Rtn. Manjunath R.N.
Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

Vol. 42 25 - 12 - 2025 ISSUE 18

## Disease Prevention and Treatment Month

### ದಿನಾಂಕ 18-12-2025ರ ವಾರದ ಸಭೆಯ ವರದಿ

ದಿನಾಂಕ 18-12-2025ರ ವಾರದ ಸಭೆಯು ವಾರ್ಷಿಕ ಸರ್ವ ಸದಸ್ಯರ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್ ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು ಆಹ್ವಾನಿಸಿದರು. ಮೊದಲಿಗೆ ರೊ. ಶ್ವೇತಾ ಆಚಾರ್ಯರವರು ರೋಟರಿ ಮಾಹಿತಿಯನ್ನು ವಾಚಿಸಿದರು.

ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್‌ರವರು 10-12-2025ರಂದು ನಡೆದ ಆಡಳಿತ ಮಂಡಳಿ ಸಭೆಯ ನಡವಳಿಯನ್ನು ಸಭೆಯಲ್ಲಿ ಓದಿದರು.

ಖಜಾಂಚಿ ರೊ. ಬದರಿ ಪ್ರಸಾದ್‌ರವರು ನವೆಂಬರ್-25 ರ ಲೆಕ್ಕಪತ್ರ ವನ್ನು ಮಂಡಿಸಿ ಅನುಮೋದನೆ ಪಡೆದರು.

ರೊ. ಶಿಲ್ಪಾ ಹೆಚ್.ಜಿ. ಅವರು ನವೆಂಬರ್ ತಿಂಗಳಲ್ಲಿ ನ್ಯೂಜನರೇಷನ್ ಅಡಿಯಲ್ಲಿ ನಡೆಸಿದ 13 ಕಾರ್ಯಕ್ರಮದ ವಿವರ ನೀಡಿದರು. ಕಾರ್ಯದರ್ಶಿ ಯವರು ದಿನಾಂಕ 21-12-2025ರಂದು ನಡೆಯುವ ಪಲ್ಸ್ ಪೋಲಿಯೋ ಕಾರ್ಯಕ್ರಮದ ವ್ಯವಸ್ಥೆಯ ಬಗ್ಗೆ ವಿವರಿಸಿದರು. ಅಧ್ಯಕ್ಷರು ಈ ಕಾರ್ಯ ಕ್ರಮಕ್ಕೆ ಎಲ್ಲಾ ರೋಟರಿ ಸದಸ್ಯರು ಸಕ್ರಿಯವಾಗಿ ಭಾಗವಹಿಸುವಂತೆ ಮನವಿ ಮಾಡಿದರು.

ಶಿವಮೊಗ್ಗದಲ್ಲಿ ದಿನಾಂಕ 20 ಮತ್ತು 21ರಂದು ಜಿಲ್ಲಾ 3182ರ ಜಿಲ್ಲಾ ಕ್ರೀಡಾಕೂಟದಲ್ಲಿ ನಮ್ಮ ಕ್ಲಬ್ ಸದಸ್ಯರು ಕ್ರೀಡೆಯಲ್ಲಿ ಭಾಗವಹಿಸುತ್ತಿರುವವರ ವಿವರ ನೀಡಿದರು.

ಅಧ್ಯಕ್ಷರು ತಮ್ಮ ಪ್ರಕಟಣೆಯಲ್ಲಿ ನವೆಂಬರ್-25ರಲ್ಲಿ ಆರೋಗ್ಯ ತಪಾಸಣಾ ಶಿಬಿರ, ರಕ್ಷಕನಿಗೆ ರಕ್ಷೆ, ದುಂಡು ಮೇಜಿನ ಸಭೆ, ಸ್ವದೇಶಿ ಮೇಳ ಸೇರಿದಂತೆ ಒಟ್ಟು 33 ಕಾರ್ಯಕ್ರಮಗಳನ್ನು ನಡೆಸಿರುವುದಾಗಿ ಹೇಳಿದರು.

ನಿಕಟ ಪೂರ್ವ ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಅವರು




2026-27ನೇ ಸಾಲಿನ ಆಡಳಿತ ಮಂಡಳಿ ಚುನಾವಣೆಯ ಪ್ರಕ್ರಿಯೆ ನಡೆಸಿ 2026-27ನೇ ಸಾಲಿಗೆ ನೇಮಕವಾದ ಆಡಳಿತ ಮಂಡಳಿ ಸದಸ್ಯರ ಹೆಸರು ಗಳನ್ನು ಪ್ರಕಟಿಸಿದರು.

**ಅಧ್ಯಕ್ಷರು : ರೊ. ಡಾ॥ ಶ್ರೀಧರ್ ಎಸ್**

## ವಾರದ ಸಭೆ

ದಿನಾಂಕ : **25-12-2025, ಗುರುವಾರ**
ಸಮಯ : **ಸಂಜೆ 7.30ಕ್ಕೆ**
ವಿಷಯ : **ಕೌಟುಂಬಿಕ ಸ್ನೇಹ ಮಿಲನ**




**ನಿಕಟ ಪೂರ್ವಾಧ್ಯಕ್ಷರು : ರೊ. ಹರ್ಷ ಬಿ. ಕಾಮತ್**
**ಚುನಾಯಿತ ಅಧ್ಯಕ್ಷರು : ರೊ. ಹರಿಪ್ರಸಾದ್ ಎಸ್. (2027-28)**
**ಉಪಾಧ್ಯಕ್ಷರು : ರೊ. ಅನಿಲ್ ಪಿ. ಶೆಟ್ಟಿ**
**ಕಾರ್ಯದರ್ಶಿ : ರೊ. ಉಜ್ವಲ ರವಿ**
**ಖಜಾಂಚಿ : ರೊ. ಡಾ॥ ಜೀನತ್ ಅಂಬ್ರೀನ್**
**ಸಹಕಾರ್ಯದರ್ಶಿ : ರೊ. ವೀಣಾ ವಿಶ್ವನಾಥ್**
**ಕ್ಲಬ್ ಫೆಸಿಲಿಟೇಟರ್ : ರೊ. ರಾಜೇಂದ್ರ ಪ್ರಸಾದ್ ಎಂ.ಆರ್.**
**ಸಾರ್ಜೆಂಟ್ ಅಟ್ ಆರ್ಮ್ಸ್ : ರೊ. ನರಹರಿ ಆರ್. ಬೋರ್ಕರ್**
**ನಿರ್ದೇಶಕರುಗಳು :**
**ಕ್ಲಬ್ ಸರ್ವೀಸ್ ಎ : ರೊ. ಡಾ॥ ರಮೇಶ್ ಆರ್.**
**ಕ್ಲಬ್ ಸರ್ವೀಸ್ ಬಿ : ರೊ. ಅನಿಲ್ ಪಿ. ಶೆಟ್ಟಿ**
**ವೊಕೇಷನಲ್ ಸರ್ವೀಸ್ : ರೊ. ಅಮರ್‌ನಾಥ್**
**ಕಮ್ಯೂನಿಟಿ ಸರ್ವೀಸ್ : ರೊ. ಆರ್.ಎನ್. ಮಂಜುನಾಥ್**
**ಇಂಟರ್‌ನ್ಯಾಷನಲ್ ಸರ್ವೀಸ್ : ರೊ. ರವೀಂದ್ರ ಬೆಣ್ಣೆಹಳ್ಳಿ**
**ನ್ಯೂ ಜನರೇಷನ್ ಸರ್ವೀಸ್ : ರೊ. ಶ್ವೇತ ಆಚಾರ್ಯ**
**ಪಬ್ಲಿಕ್ ಇಮೇಜ್ : ರೊ. ವಿಷ್ಣುಮೂರ್ತಿ**

ನಂತರ ಅಧ್ಯಕ್ಷರಾದ ರೊ. ಹರ್ಷ ಕಾಮತ್‌ರವರು ಹೊಸದಾಗಿ ನೇಮಕ ವಾದ ಎಲ್ಲಾ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯವನ್ನು ಕೋರಿದರು. 2026-27ನೇ ಸಾಲಿಗೆ ಆಯ್ಕೆಯಾದ ರೊ. ಡಾ॥ ಶ್ರೀಧರ್ ಅವರು ಮುಂದಿನ ವರ್ಷ ಕ್ಲಬ್ಬಿನ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಎಲ್ಲರ ಸಹಕಾರವನ್ನು ಕೋರಿದರು.



ಇಂದಿನ ಸಭೆಯ ಹಾಜರಾತಿ ಬಹುಮಾನಕ್ಕೆ ರೊ. ಮೀರಾ ನಾಡಿಗ್, ರೊ. ಉಜ್ವಲಾ ರವಿ ಮತ್ತು ರೊ. ಮನೋಹರ್ ಕಾಮತ್‌ರವರು ಭಾಜನರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ಇವರು ಎಲ್ಲರನ್ನು ವಂದಿಸಿದರು.




ದಿನಾಂಕ 20 ಮತ್ತು 21 ಡಿಸೆಂಬರ್‌ರಂದು ರೋಟರಿ ಕ್ಲಬ್ ರಿವರ್ ಸೈಡ್ ರವರ ಸಂಯುಕ್ತ ಆಶ್ರಯದಲ್ಲಿ ಮಲೆನಾಡು ಕ್ರೀಡೋತ್ಸವದ ಆಟೋಟ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು. ಮೊದಲನೆ ದಿನ ಮುಖ್ಯವಾಗಿ ಪೆಸಿಟ್ ಕಾಲೇಜಿನ ಆವರಣದಲ್ಲಿ ಹೊರಾಂಗಣ ಕ್ರೀಡೆಗಳಿಗೆ ಆದ್ಯತೆ ನೀಡಲಾಗಿತ್ತು. ನಮ್ಮ ಕ್ಲಬ್ ಪುರುಷರ ವಾಲಿಬಾಲ್ ಪಂದ್ಯದಲ್ಲಿ ದ್ವಿತೀಯ ಸ್ಥಾನವನ್ನು ಪಡೆಯಿತು. ಎರಡನೆ ದಿನ ನೆಹರು ಇಂಡೋರ್ ಸ್ಟೇಡಿಯಂನಲ್ಲಿ ಒಳಾಂಗಣ ಕ್ರೀಡೆಗಳು ನಡೆದವು. ಮಿಡ್‌ಟೌನ್ ತಂಡವು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನವನ್ನು ಮುಡಿಗೇರಿಸಿಕೊಂಡು ಜಿಲ್ಲಾ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿತು.

## ROTARY INFORMATION

### To health and happiness



**Rtn. Shwetha Acharya**

When my fellow members first proposed that I become club president, I demurred. I had a stutter. I was terrified of speaking. But having club mem-bers who supported me and surrounded me with affection enabled me to face my fear, and I found a way to stand confidently before a crowd.

Today, I regularly address audiences- some numbering in the thousands in a language that is not native to me. The Rotary members in 4 ROTARY NEMS DECEMBER 2025 my life helped me create lasting change within

**Francesco Arezzo,** President, Rotary International



ದಿನಾಂಕ 21-12-2025ರಂದು ಬೆಳಿಗ್ಗೆ ನಗರದ ಮಿಳಘಟ್ಟದಲ್ಲಿ ನಮ್ಮ ಕ್ಲಬ್ ಮತ್ತು ಆರೋಗ್ಯ ಇಲಾಖೆ ವತಿಯಿಂದ ಆಯೋಜಿಸಲಾದ ಪೋಲಿಯೋ ನಿರ್ಮೂಲನ ಕಾರ್ಯಕ್ರಮದ ಉದ್ಘಾಟನೆಯನ್ನು ಪಿಡಿಜಿ ರೊ. ಡಾ|| ಪಿ. ನಾರಾಯಣ್‌ರವರು ನೆರವೇರಿಸಿದರು. ಪೋಲಿಯೋ ಮುಕ್ತ ಭಾರತದ ಕನಸನ್ನು ಸಾಕಾರ ಗೊಳಿಸುವ ದೇಸೆಯಲ್ಲಿ ರೋಟರಿ ಸಂಸ್ಥೆ ಜನಜಾಗೃತಿ, ಲಸಿಕೆ ಅಭಿಯಾನ ಮತ್ತು ಸಮುದಾಯ ಸಂಪರ್ಕದ ಮೂಲಕ ಅಮೂಲ್ಯ ಕೊಡುಗೆ ನೀಡುತ್ತಿದೆ ಎಂದು ಅವರು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ನಗರದ ಶಾಸಕರಾದ ಶ್ರೀ ಚನ್ನಬಸಪ್ಪ, ರೊ. ಡಾ|| ಶಿವರಾಮಕೃಷ್ಣ, ರೊ. ಶಿವಶಂಕರ್ ಕೆ.ಜಿ. ಸೇರಿದಂತೆ ಅನೇಕ ರೋಟರಿ ಸದಸ್ಯರು ಉಪಸ್ಥಿತರಿದ್ದರು.

### ROTARIAN BIRTHDAY *Greetings to*

| | |
|---|---|
| Rtn. Uday Pete | Dec-20 |
| Rtn. Ruderesh J.R. | Dec-23 |
| Rtn. Joseph Balraj | Dec-26 |
| Rtn. Deepak M. Jain | Dec-28 |

### MARRIAGE ANNIVERSARY *Greetings to*

| | |
|---|---|
| Rtn. Prakash D.V. | Dec-18 |
| Ann. Sujatha | |
| Rtn. K.V.L. Raju | Dec-19 |
| Ann. Archana | |

### ANN BIRTHDAY *Greetings to*

| | |
|---|---|
| Ann. Jyothi Rudresh | Dec-22 |
| Ann. Revathi Shivashankar | Dec-25 |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764